ಜೀವ ತಿಂದು ಬಿಟ್ಟಿದ್ದ. ನನ್ನ ಜೊತೆ ಪೂರಾ ಏನಾಯ್ತು ಎಂದು ಬಚ್ಚಿಡದೆ ಹೇಳಿ... ಡೀಲ್ ಮಾಡಿ ಮುಗಿಸುವೆ... ಡೀಲ್‌ಗೆ ಡೀಲೇ ನ್ಯಾಯ ಎಂದು ಕಂದಕದಲ್ಲಿ ಉರುಳಿಸಿ ಲಾಭ ಮಾಡಿಕೊಳ್ಳುವ ಸ್ಕೆಚ್ಚು ಹಾಕಿದ. ಕ್ರೈಮ್ ಶೀಟ್ ಒಳಗೆ ಹೇಗೆ ಫಿಕ್ಸ್ ಮಾಡಬಹುದು ಎಂಬುದನ್ನು ಆ ಪತ್ರಕರ್ತ ಪೋಲೀಸರಿಗಿಂತಲೂ ಚೆನ್ನಾಗಿ ತಿಳಿದಿದ್ದ. ಏನೇನೊ ಆಗಿತ್ತು. ಗೋವಿಂದ ಪೇದೆಗಳ ಕಾಲಿಗೆ ಬಿದ್ದು ಅರೆ ಜೀವವಾಗಿ ಬಿಟ್ಟು ಬಿಡೀ... ವಯಸ್ಸಾಗಿ ನಲವತ್ತನೆ ವರ್ಷಕ್ಕೆ ಮದುವೆ ಆದೇ... ನನ್ನ ಹೆಂಡತಿ ತುಂಬು ಗರ್ಭಿಣಿ. ನನಗೆ ಯಾರೂ ಇಲ್ಲಾ... ಜೀವ ಧಯೆ ತೋರಿ ಎನ್ನುವಾಗ ಅಲ್ಲಿ ಯಾರೂ ಕರಗಲಿಲ್ಲ. ಉಳಿದ ನಾವು ಮೂವರೂ ಗೋವಿಂದನ ಸಾಕ್ಷಿಗೆ ಸಮ್ಮತಿಸಬೇಕಾದ ಬಿಕ್ಕಟ್ಟು ಎದುರಾಗಿತ್ತು. ಅವನ ಪರವಾಗಿ ನಿಲ್ಲಲೇಬೇಕಾಗಿತ್ತು. ಆ ಜೀನಿಯಸ್ ನಿಗೂಢ ಮೌನವಹಿಸಿ ಇದಕ್ಕೂ ನನಗೂ ಏನೂ ಸಂಬಂಧ ಇಲ್ಲ ಎಂಬಂತೆ ಮಗುಮ್ಮಾದ. ಪತ್ರಿಕೆಗಳಲ್ಲಿ ಈ ಬಗೆಗಿನ ಅಪರಾಧ ಸುದ್ದಿಯ ಗಮನಿಸಿ ಇಲ್ಲೇನೊ ಬಡಪಾಯಿ ವಿಚಾರವಾದಿ ಸಾಹಿತಿ ಮಿತ್ರರಿಗೆ ತಲೆದಂಡವಾಗುತ್ತಿದೆಯೆಲ್ಲಾ ಎಂದು ಸ್ವಯಂ ಪ್ರೇರಿತರಾಗಿ ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಕೇಸು ದಾಖಲಿಸಿ ಆ ಅಮಾಯಕ ಗೋವಿಂದನನ್ನು ಪೋಲೀಸರ ವಶದಿಂದ ಬಿಡಿಸಿಕೊಂಡು ಏನಾಯ್ತು ಎಂಬ ಎಲ್ಲ ವಿವರಗಳ ಸಂಗ್ರಹಿಸಿದರು. ಅವರು ಬಹಳ ಪ್ರಸಿದ್ಧ ಕ್ರಿಮಿನಲ್ ಲಾಯರ್ ಎಂದು ದೇಶದಲ್ಲೇ ಹೆಸರುವಾಸಿ ಆಗಿದ್ದು ಸ್ವತಃ ತಾವೇ ಒಬ್ಬ ಲೇಖಕರಾಗಿದ್ದರು. ಆ ಹನುಮಂತರಾಯರು ಬಹಳ ಮಾನವೀಯರಾದರೂ ಕ್ರಿಮಿನಲ್ ಕೇಸುಗಳನ್ನು ಸಲೀಸಾಗಿ ಗೆಲ್ಲಿಸಿಕೊಡುತ್ತಿದ್ದರು. ಅಪರಾಧ ಮತ್ತು ಮನುಷ್ಯತ್ವ ಎರಡನ್ನೂ ಅವರು ಹೇಗೆ ಬೆಸೆದುಕೊಂಡು ನ್ಯಾಯದ ವಾದ ಮಾಡುತ್ತಿದ್ದರೊ ಏನೊ... ಅಂತೂ ಅವರು ನಮ್ಮ ಪಾಲಿಗೆ ನ್ಯಾಯ ದೇವತೆಯಂತೆ ಬಂದಿದ್ದರು.

ಅಷ್ಟರಲ್ಲಾಗಲೇ ನಮ್ಮನ್ನು 'ನಗರ ನಕ್ಸಲ್' ಎಂಬ ಪಟ್ಟಿಗೆ ಸೇರಿಸಿದ್ದರು. ಬಲಪಂಥೀಯರು ಸಾರಸಗಟಾಗಿ ನಮ್ಮಂತವರನ್ನು ಅಂತಹ ಒಂದು ಕಸದ ಬುಟ್ಟಿಗೆ ಹಾಕಿದ್ದರು. ಗೋವಿಂದ ಏಟು ಸಹಿಸಲಾರದೆ, 'ಹೌದು ನಾವು ನಗರ ನಕ್ಸಲರು... ನಮಗಾಗದವರು ಹಾಗೆನ್ನುವರು' ಎಂದು ಉತ್ತರಿಸಿದ್ದ. 'ಸರಿಯಾಗಿ ಬೊಗಳಲೊ ಸೂ... ಮಗನೆ' ಎಂದು ಹಿಂಬದಿಗೆ ತಿವಿದಾಗ...'ಹೌದೂ... ನಾನು ದೇಶದ್ರೋಹಿ ಸಮಾಜ ಕಂಟಕನಾಗಿಬಿಟ್ಟೇ... ಜೀವ ಉಳಿಸಿಕೊಡೀ... ಆ ಪಾಪಿಯ ಜೊತೆ ಹೋಗಿ ಕುಡಿಯಬಾರದಿತ್ತು... ತಪ್ಪಾಯ್ತು' ಎಂದು ತನಗಿಂತ ಇಪ್ಪತ್ತು ವರ್ಷ ಚಿಕ್ಕವನಾಗಿದ್ದ ಸಬ್‌ಇನ್‌ಸ್ಪೆಕ್ಟರ್‌ನ ಎರಡೂ ಕಾಲುಗಳ ಹಿಡಿದು ನಡುವೆ ಮುಖವಿರಿಸಿ ಬಿದ್ದುಕೊಂಡು ಎದ್ದೇಳಲು ನಡೆಯಲು ಆಗದೆ ನರಳಾಡಲು... ಮರುದಿನದ ಪತ್ರಿಕೆಗಳಲ್ಲಿ ಮತ್ತೆ ಅದು ಮಸಾಲೆ ಸುದ್ದಿಯಾಗಿ ತಪ್ಪೊಪ್ಪಿಕೊಂಡ ಉಗ್ರ ವಿಚಾರವಾದಿ ಎಂಬ ಶೀರ್ಷಿಕೆಯ ಅಡಿಯಲ್ಲಿ ಎಲ್ಲೆಲ್ಲಿಗೊ ಕನೆಕ್ಟ್ ಆಗಿತ್ತು.

ಒಂದು ಉಡಾಫೆಯ ಉದ್ಯಮಿಯ ಮಂಗಾಟದ ಡಿನ್ನರ್ ಪಾರ್ಟಿಯ ಅಮಲಿನ ಯಕಶ್ಚಿತ್ ಹರಟೆಯ ಊಸಿನ ಮಾತುಗಳು ಎಲ್ಲೆಲ್ಲಿಗೊ ಆ ಅಮಾಯಕರನ್ನು ಬಂಧಿಸಿ ಬಿಟ್ಟಿದ್ದವು. ವಿಚಾರವಾದಿ ಸಾಹಿತಿಗಳು ಉಗ್ರಗಾಮಿಗಳ ಇನ್ನೊಂದು ರೂಪ ಎಂದು ಆಗದವರು ಮಾಧ್ಯಮಗಳಲ್ಲಿ ಗುಡುಗಿದ್ದರು. ವಿಚಾರವಾದಿಗಳ ಅದೊಂದು ಅಕಸ್ಮಾತ್ ತಪ್ಪಿನ ಜಾಡು ಹಿಡಿದು ಇಡೀ ನಾಡಿನ ಸಾಹಿತಿ ಕಲಾವಿದರು ಪ್ರಗತಿಪರರು ಅಯೋಗ್ಯ ಹಿಂದೂಗಳೆಂದು ಜರಿದು; ಇಂತವರನ್ನು ಪಾಕಿಸ್ತಾನಕ್ಕೆ ಕಳುಹಿಸಿ ಎಂದು ಯಾವುದಾವುದೊ ಸಂಗತಿಗಳ ಬೆರೆಸಿ ಜನರ ಮನಸ್ಸಿನಲ್ಲಿ ನಮ್ಮನ್ನು ಉಗ್ರಗಾಮಿಗಳು ಎಂಬಂತೆ ಬಲವಾಗಿ ಬಿಂಬಿಸಿ ಬಿಟ್ಟಿದ್ದರು. ನಮಗೆ ಬಾಯೇ ಇರಲಿಲ್ಲ. ಉಸಿರಾಡಲೂ ಕಷ್ಟವಾಗುತ್ತಿತ್ತು.

ಜೈಲಿನಲ್ಲಿ ಸೆರೆಯಾಗಿ ಬಿದ್ದಿದ್ದ ನಮ್ಮನ್ನು ಪ್ರಖ್ಯಾತ ಕ್ರೈಮ್ ಪತ್ರಕರ್ತ ಬಂದು ವಾಸ್ತವ ಏನೆಂದು ವರದಿ ಮಾಡಿ ಸಂದರ್ಶಿಸಲು ಬಂದಿರುವೆ ಎಂದು ಜೈಲಧಿಕಾರಿಯ ಜೊತೆ ವಿಶ್ವಾಸದ ನಗು ಬೀರಿದ. ಅಷ್ಟೊತ್ತಿಗಾಗಲೇ ನಮ್ಮನ್ನು ಸರಳುಗಳ ಹಿಂದಿನ ನರಭಕ್ಷಕ ವಿಚಾರವಾದಿಗಳು ಎಂಬ ಶೀರ್ಷಿಕೆಯಲ್ಲಿ ಖಾಸಗಿ ಟಿ.ವಿ ಚಾನೆಲ್‌ನವರು ನಮ್ಮ ಹತ್ತು ತಲೆಮಾರಿಗಾಗುವಷ್ಟು ಅಪಪ್ರಚಾರ ಮಾಡಿ ನಮ್ಮನ್ನು ಛಿದ್ರವಾಗಿ ಕೊಂದುಬಿಟ್ಟಿದ್ದರು. ಆ ಪಾಪಿ ಡಾನ್ ಮೇಲೆ ಗುರಿಯಿಡುವ ಬದಲು ನಮಗೆ ಢಮಾರ್ ಎಂದು ಗುಂಡು ಹೊಡೆದಿದ್ದರೆ ಕ್ಷಣ ಮಾತ್ರದಲ್ಲಿ